**ದಿನಾಂಕಃ 12-09-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿತರ ವಕೀಲರಾದ ಶ್ರೀ ಎಫ್ ಎಸ್ ಪಿ ರವರಿಂದ**

10. ನಾನು 5 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಈಗ ನನಗೆ 64-65 ವರ್ಷ ವಯಸ್ಸಾಗಿದೆ. ನಾನು ಮೂಲತಃ ಕಣಗಿಲ್ ಗ್ರಾಮದವನಾಗಿರುತ್ತೇನೆ. ಹಿಗ್ಗೆ 20 ವರ್ಷಗಳಿಂದಿ ಅಂಕೋಲಾದ ವಂದಿಗೆ ಗ್ರಾಮದಲ್ಲಿ ವಾಸ ಇದ್ದೆನೆ. ನಾನು ಮೊದಲಿಗೆ ಕೃಷಿ ಕೆಲಸ ಮಾಡುತ್ತಿದ್ದೆ. ನಾನು ಅಪಘಾತಕ್ಕೆ ಒಳಗಾದ ನಂತರ ಯಾವುದೇ ಕೆಲಸ ಮಾಡುತ್ತಿಲ್ಲ. ನಾನು ಅಪಘಾತಕ್ಕೆ ಒಳಗಾಗಿ 9 ವರ್ಷ ಆಗಿದೆ. ನಾನು ಬೆಳಸೇ ಗ್ರಾಮದ ಸರ್ವೆ ನಂಬರ್ 140/2 ರ ತತ್ಕಾಲ್ ಪೋಡಿಗೆ ಅರ್ಜಿ ಹಾಕಿದ್ದೆ . ನಾನು ಕಳೆದ ಹಲವಾರು ವರ್ಷಗಳಿಂದ ನನ್ನ ಅರ್ಜಿ ಅಲ್ಲದೇ ಬೇರೆ ಅನೇಕರ ತತ್ಕಾಲ್ ಪೋಡಿ ಅರ್ಜಿ ಕೆಲಸವನ್ನು ಮಾಡಿಸಿದ್ದೇನೆ ಎಂದರೆ ಸಣ್ಣ ಪುಟ್ಟ ಕೆಲಸಗಳನ್ನು ಮಾಡಿಸಿದ್ದೇನೆ. ನಾನು ಎಲ್ಲರ ಕೆಲಸಕ್ಕಾಗಿ ಅಂಕೋಲಾದ ಭೂ ದಾಖಲಾತಿ ಕಚೇರಿಯಲ್ಲಿ ಸದಾ ಇರುತ್ತೇನೆ ಎಂದರೆ ಸರಿಯಲ್ಲ. ವಂದಿಗೆಯಿಂದ ಬೆಳಸೇ ಗ್ರಾಮಕ್ಕೆ ಸುಮಾರು 3 ಕಿ.ಮೀ ದೂರದಲ್ಲಿದೆ. ಸರ್ವೆ ನಂಬರ್ 140/2 ನನ್ನ ಚಿಕ್ಕಪ್ಪನ ಆಸ್ತಿ ಅದನ್ನು ನನ್ನ ಚಿಕ್ಕಪ್ಪ ಮರಣಶಾಸನದ ಮೂಲಕ ನನಗೆ ಬರೆದುಕೊಟ್ಟಿದ್ದರು. ನನಗೆ ಕುಟುಂಬ ಮಕ್ಕಳು ಇದ್ದಾರೆ. ಅವರು ವಂದಿಗೆ ಗ್ರಾಮದಲ್ಲಿ ವಾಸ ಇದ್ದಾರೆ. ಈ ಪ್ರಕರಣ ಉದ್ಭವಕ್ಕೆ ನಾನು ಸಲ್ಲಿಸಿದ ಪೋಡಿ ಅರ್ಜಿ ಕಾರಣ ಎಂದರೆ ಹೌದು. ಆ ಪೋಡಿ ಅರ್ಜಿ ಪ್ರಕರಣದಲ್ಲಿ ದೇವಿದಾಸ್ ವಿಠೋಬಾ ನಾಯಕ್ ನನ್ನ ಎದುರುದಾರ ಆಗಿದ್ದರು ಎಂದರೆ ಈಶ್ವರಯ್ಯರವರು ದೇವಿದಾಸ್ ವಿಠೋಬಾ ನಾಯಕ್ ರವರ ಮೂಲಕ ತಕರಾರು ಹಾಕಿದ್ದರು. ಈಶ್ವರಯ್ಯ ಮೋಜಣಿದಾರರು. ನಾನು ಆ ಪ್ರಕರಣದಲ್ಲಿ ಮತ್ತು ಈ ಪ್ರಕರಣದಲ್ಲಿ ತಪ್ಪು ಮಾಹಿತಿ ನೀಡಿದ್ದೇನೆ ಎಂದರೆ ಸರಿಯಲ್ಲ.

11. ನನ್ನ ಅರ್ಜಿ ಬಗ್ಗೆ ಮೋಜಣಿದಾರರು 3-4 ಬಾರಿ ನನಗೆ ತಿಳುವಳಿಕೆ ಪತ್ರ ನೀಡಿ ದಾಖಲಾತಿ ಹಾಜರುಪಡಿಸಲು ಕೇಳಿದ್ದರೂ ನಾನು ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸುಳ್ಳು. ದೇವಿದಾಸ್ ವಿಠೋಬಾ ನಾಯಕ್ ಅಥವಾ ಈಶ್ವರಯ್ಯ ರವರು ಆ ಪ್ರಕರಣಕ್ಕೆ ಕಾರಣರು ಅಲ್ಲ ಎಂದರೆ ಸರಿಯಲ್ಲ, ಪೋಡಿಗೆ ನಾನು ಅರ್ಜಿ ಹಾಕಿದ್ದೆ ಆದರೆ ತಕರಾರಿಗೆ ಅವರು ಕಾರಣ ಆಗಿರುತ್ತಾರೆ. ನನ್ನ ಈ ಹೇಳಿಕೆ ಅಸಂಮಜಸ ಎಂದರೆ ಸರಿಯಲ್ಲ. ನಾನು ಹಾಕಿದ್ದ ಅರ್ಜಿಯ ಸಂಖ್ಯೆ ನನಗೆ ನೆನಪಿಲ್ಲ. ದಿನಾಂಕ 24.06.2022 ರಲ್ಲಿ ನಾನು ಅರ್ಜಿ ಸಲ್ಲಿಸಿದ್ದೆ. ದಿನಾಂಕ 24.08.2022, 10.10.2022 ಮತ್ತು 28.10.2022 ರಂದು ಅಳತೆಗೆ

ನೋಟಿಸು ನೀಡಿ ಬಂದರು ನನ್ನ ಮತ್ತು ನನ್ನ ಎದುರುದಾರರಾದ ದೇವಿದಾಸ್ ವಿಠೋಬಾ ನಾಯಕ್ ನಡುವೆ ಹೊಂದಾಣಿಕೆ ಇಲ್ಲದ ಕಾರಣ ಮತ್ತು ನಮ್ಮ ನಡುವೆ ಜಗಳವಾದ ಕಾರಣ ಜಮೀನಿನ ಅಳತೆ ಕಾರ್ಯ ಮಾಡಲು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ 140/2 ಪೂರ್ತಿ ಜಮೀನು ನನಗೆ ಸೇರಿತ್ತು ಮತ್ತು ಅದಕ್ಕೆ ಸುತ್ತಲೂ ಕಾಂಪೌಂಡ್ ಇದೆ ಎಂದು ಸ್ವತಃ ನುಡಿದಿರುತ್ತಾರೆ. ಆ ಜಮೀನಿಗೆ ಕಂಪೌಂಡ್ ಇಲ್ಲ ಮತ್ತು ಆ ಜಮೀನು ನನ್ನ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಜಮೀನಿನ ಚೆಕ್ಕು ಬಂದಿಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ಅರ್ಜಿಯಲ್ಲಿ ಅದನ್ನು ನಮೂದಿಸಿಲ್ಲ, ಭೂ ದಾಖಲೆಗಳ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ನಾನು ಚೆಕ್ಕು ಬಂದಿ ಹೇಳಿರುತ್ತೇನೆ. ನಾನು ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 04.11.2022, 15.11.2022 ಮತ್ತು 22.11.2022 ರಂದು ವಿಚಾರಣೆಯ ಕಾಲದಲ್ಲಿ ಮತ್ತು 12.12.2022 ರಂದು ಸ್ಥಳ ತನಿಖೆಯ ಕಾಲದಲ್ಲಿ ನನ್ನ ಜಮಿನಿನ ಚೆಕ್ಕು ಬಂದಿ ಮತ್ತು ಅದಕ್ಕೆ ಸಂಬಂಧಪಟ್ಟ ದಾಖಲಾತಿ ನೀಡಲು ನಾನು ಸಮಯವಾಕಾಶ ಕೇಳಿರುತ್ತೇನೆ ಎಂದರೆ ಸರಿಯಲ್ಲ. ಆ ರೀತಿ ಸಮಯಾವಕಾಶವನ್ನು ದೇವಿದಾಸ್ ವಿಠೋಬಾ ನಾಯಕ್ ರವರು ಕೇಳಿದ್ದರು, ನಾನು ಕೇಳಿರುವುದಿಲ್ಲ. ದಿನಾಂಕ 05.01.2023 ರಂದು ಮತ್ತೊಂದು ಅವಕಾಶ ನೀಡಿದ್ದಾಗಲೂ ನಾನು ಹಾಜರಾಗಲಿಲ್ಲ ಮತ್ತು ಚೆಕ್ಕು ಬಂದಿ ದಾಖಲಾತಿ ಕೊಡಲಿಲ್ಲ ಎಂದರೆ ಜಮೀನು ನನಗೆ ಹೇಗೆ ಬಂತು ಎಂದು ದಾಖಲಾತಿ ಕೇಳಿದ್ದರು, ನಾನು ನನ್ನ ಚಿಕ್ಕಪ್ಪನಿಗೆ ಖರೀದಿ ಮೂಲಕ ಆ ಜಮೀನು ಬಂದಿದ್ದ ಬಗ್ಗೆ ದಾಖಲಾತಿಯನ್ನು ಒದಗಿಸಿರುತ್ತೇನೆ. ನಾನು ಈಗ ಹೇಳಿದ್ದು ಪೂರ್ತಿ ಸುಳ್ಳು ಇದೆ ಎಂದರೆ ಸರಿಯಲ್ಲ. ದೇವಿದಾಸ್ ವಿಠೋಬಾ ನಾಯಕ್ ಗೆ ಭೂ ನ್ಯಾಯ ಮಂಡಳಿಯಿಂದ ಸರ್ವೆ ನಂಬರ್ 140/1 ರಲ್ಲಿ 3 ಎಕರೆ 20 ಗುಂಟೆ ಜಮೀನು ಮಂಜೂರು ಆಗಿತ್ತು. ಅದು ಬೇರೆ ಜಮೀನು ಮತ್ತು ನನ್ನ ಚಿಕ್ಕಪ್ಪನಿಂದ ನನಗೆ ಬಂದ ಜಮೀನು ಬೇರೆ ಆಗಿರುತ್ತದೆ. ಕೊನೆಯದಾಗಿ ನನ್ನ ಅರ್ಜಿಯನ್ನು ತಿರಸ್ಕರಿಸಿ ಆದೇಶ ಮಾಡಿದವರು ಯಾರು ಎಂದರೆ ಎ ಡಿ ಎಲ್ ಆರ್ ಅಥವಾ ಡಿ ಡಿ ಎಲ್ ಆರ್ ಆದೇಶ ಮಾಡಿದ್ದಾರೆ. ನನ್ನ ಪೋಡಿ ಅರ್ಜಿಯನ್ನು ಸುಂದರ್ ಎಂಬ ಅಧಿಕಾರಿ ತಿರಸ್ಕರಿಸಿದ್ದಾರೆ ಎಂದರೆ ನನಗೆ ಆ ಅಧಿಕಾರಿಯ ಹೆಸರು ಗೊತ್ತಿಲ್ಲ. ದಿನಾಂಕ 17.04.2023 ರಂದು ಎ ಡಿ ಎಲ್ ಆರ್ ರವರು ಮಾಡಿರುವ ಆದೇಶದಲ್ಲಿ ಸುಂದರ್ ರವರ ಹೆಸರು ಇದೆ ಎಂದರೆ ಈ ಪ್ರಕರಣದಲ್ಲಿ ದಾಳಿ ಮಾಡಿದ ನಂತರ ಈಗ ತೋರಿಸಿದ ಆದೇಶವನ್ನು ಮಾಡಿರುತ್ತಾರೆ. ಸಾಕ್ಷಿಗೆ ತೋರಿಸಿದ ದಾಖಲಾತಿ ನ್ಯಾಯಾಲಯದ ಕಡತದಲ್ಲಿ ಇದ್ದು ಅದನ್ನು ನಿಡಿ-1 ಎಂದು ನಿಶಾನೆ

ಮಾಡಲಾಯಿತು. ಅದು ದಿನಾಂಕ 17.04.2023 ರಂದು ಎ ಡಿ ಎಲ್ ಆರ್ ರವರು ಮಾಡಿರುವ ಆದೇಶ ಆಗಿದೆ. ನನಗೆ ನಿಡಿ-1 ಅನ್ನು ತೋರಿಸಿದ ಮೇಲೆ ಆ ಆದೇಶ ಮಾಡಿರುವುದು ಸುಂದರ್ ಎಂಬ ಅಧಿಕಾರಿ ಎಂದು ಈಗ ಗೊತ್ತಾಗಿರುತ್ತದೆ. ಹಾಗಾಗಿ ಆರೋಪಿಯು ಈಶ್ವರಯ್ಯರವರ ಮೂಲಕ ನನ್ನ ಕೆಲಸ ಮಾಡಿಕೊಡುತ್ತೇನೆ ಎಂದು ಹೇಳಿದ್ದರು ಎಂಬುದು ಸುಳ್ಳು ಎಂದರೆ ಸರಿಯಲ್ಲ. ಈಶ್ವರಯ್ಯರವರ ಪಾತ್ರ ನನ್ನ ಪೋಡಿಯ ಅರ್ಜಿಯ ಬಗ್ಗೆ ಏನೂ ಇಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಆರೋಪಿಯು ನನ್ನ ಪೋಡಿಯ ಅರ್ಜಿಯ ಬಗ್ಗೆ ಯಾವುದೇ ಹಣ ಕೇಳಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನನ್ನ ಕೆಲಸವನ್ನು ಮಾಡಿಸಿಕೊಡುವುದಾಗಿ ಯಾವತ್ತೂ ನನಗೆ ಹೇಳಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ದಾಖಲಾತಿ ಒದಗಿಸದೇ ಇದ್ದ ಕಾರಣ ಸಕ್ಷಮ ಅಧಿಕಾರಿಯವರ ಕಡೆಯಿಂದ ನನ್ನ ಪೋಡಿ ಅರ್ಜಿ ತಿರಸ್ಕಾರ ಆಗಿದೆ ಎಂದರೆ ಸರಿಯಲ್ಲ. ನನ್ನ ದೂರಿನಲ್ಲಿ ಮತ್ತು ನನ್ನ ಸಾಕ್ಷ್ಯದಲ್ಲಿ ಸುಂದರ್ ರವರ ಹೆಸರನ್ನು ನಮೂದಿಸಿಲ್ಲ ಎಂದರೆ ನನಗೆ ಅವರ ಬಗ್ಗೆ ಗೊತ್ತಿರಲಿಲ್ಲ, ಅವರ ಹೆಸರನ್ನು ನಾನು ನಮೂದಿಸಿಲ್ಲ.

12. ಆರೋಪಿಯ ಪರಿಚಯ ನನಗೆ ಆದ ದಿನಾಂಕ ಗೊತ್ತಿಲ್ಲ. ಆರೋಪಿಯು ವರ್ಗ ಆಗಿ ಬಂದು ಪ್ರಭಾರ ವಹಿಸಿಕೊಂಡಾಗ ನನಗೆ ಆರೋಪಿಯ ಪರಿಚಯ ಆಯಿತು. ಆರೋಪಿ ಪ್ರಭಾರ ವಹಿಸಿಕೊಳ್ಳುವುದಕ್ಕೆ ಒಂದು ತಿಂಗಳ ಹಿಂದೆ ಆ ಕಚೇರಿಗೆ ವರ್ಗ ಆಗಿ ಬಂದಿದ್ದರು. ಅದೇ ಕಚೇರಿಯಲ್ಲಿ ಬೇರೆ ಕಡೆ ಕುಳಿತುಕೊಳ್ಳುತಿದ್ದರು, ನಂತರ ಆರೋಪಿ ಎ ಡಿ ಎಲ್ ಆರ್ ಆಗಿ ಪ್ರಭಾರ ವಹಿಸಿಕೊಂಡರು ಆಗ ನನಗೆ ಅವರ ಪರಿಚಯ ಆಯಿತು. ಒಂದು ತಿಂಗಳು ಮೊದಲೇ ಆರೋಪಿ ಆ ಕಚೆರಿಯಲ್ಲಿ ಬಂದು ಬೇರೆ ಕಡೆ ಕುಳಿತುಕೊಳ್ಳುತ್ತಿದ್ದ ಬಗ್ಗೆ ನನಗೆ ಹೇಗೆ ಗೊತ್ತಾಯಿತು ಎಂದರೆ ನಾನು ಆ ಕಚೇರಿಗೆ ಹೋಗುತ್ತಿದ್ದ ಕಾರಣ ಗೊತ್ತಿತ್ತು. ದಿನಾಂಕ 09.11.2022 ರಂದು ಆರೋಪಿ ವರ್ಗ ಆಗಿ ಸದರಿ ಕಚೇರಿಗೆ ಬಂದರು ಎಂದರೆ ಇರಬಹುದು. ದಿನಾಂಕ 19.12.2022 ರಂದು ಆರೋಪಿ ಎ ಡಿ ಎಲ್ ಆರ್ ಆಗಿ ಪ್ರಭಾರ ವಹಿಸಿಕೊಂಡರು ಎಂದರೆ ಇರಬಹುದು. ದಿನಾಂಕ 09.11.2022 ರ ನಂತರ 3-4 ದಿನಗಳಲ್ಲಿ ನಾನು ಆರೋಪಿಯನ್ನು ಬೇಟಿಯಾಗಿ ಆರೋಪಿಯ ಪರಿಚಯ ಮಾಡಿಕೊಂಡೆ ಎಂದರೆ ಸರ್ವೆ ವಿಭಾಗದಲ್ಲಿ ಇದ್ದ ಇನ್ನೊಬ್ಬ ರಾಘವ ಎಮ್ ನಾಯಕ್ ಎನ್ನುವರು ಆರೋಪಿಯನ್ನು ಹೊಸದಾಗಿ ಬಂದಿರುವ ಸಾಹೇಬರು ಎಂದು ನನಗೆ ಪರಿಚಯ ಮಾಡಿಕೊಟ್ಟಿದ್ದರು. ರಾಘವ

ಎಮ್ ನಾಯಕ್ ಅಲ್ಲಿ ಸರ್ವೆಯರ್ ಆಗಿದ್ದರು ಅವರು ನನ್ನ ದೂರದ ಸಂಬಂಧಿ ಎಂದರೆ ಸರಿಯಲ್ಲ. ಅವರ ತಾಯಿ ನನ್ನ ಮೂಲ ಊರಿನವರು. ನನಗೆ ಆ ಕಚೇರಿಯಲ್ಲಿ 10–20 ಜನ ಸಿಬ್ಬಂದಿ ಪರಿಚಯ ಇತ್ತು ಎಂದರೆ ನಾನು ಆ ಕಚೇರಿಗೆ ಹೋಗುತ್ತಿದ್ದೆ ಆದ್ದರಿಂದ ಅವರನ್ನು ನೋಡಿದ್ದೆ. ಅವರು ಯಾರು ಯಾರು ಎಂದು ಮಾತ್ರ ಪದನಾಮಗಳು ಗೊತ್ತಿತ್ತು. ನಾನು ಹೇಳಿದ ರಾಘವ ನಾಯಕ್ ಜೊತೆ ನನಗೆ ಭಿನ್ನಾಭಿಪ್ರಾಯ ಇತ್ತು ಮತ್ತು ನಾನು ಅವನ ವಿರುದ್ಧ ಒಂದು ಪಿರ್ಯಾದನ್ನು ಕೊಟ್ಟಿದ್ದೆ ಎಂದರೆ ಒಂದು ಬಾರಿ ಅವನು ನನಗೆ ದೂರವಾಣಿಯಲ್ಲಿ ಇಂಗ್ಲಿಷನಲ್ಲಿ ಮಾತನಾಡಿ ತಾನು ಸಿ ಬಿ ಐ ಅಧಿಕಾರಿ ಎಂದು ಬೆದರಿಕೆ ಹಾಕಿ ತನಿಖೆಗೆ ಬರುತ್ತಿರುವುದಾಗಿ ರೊಕ್ಕ ಕೊಡಬೇಕು ಎಂದು ಹೇಳಿದ್ದರು, ಆದ್ದರಿಂದ ಅವರ ವಿರುದ್ಧ ನಾನು ಪೊಲೀಸ ನವರಿಗೆ ದೂರನ್ನು ಕೊಟ್ಟಿದ್ದೆ. ಆರೋಪಿ ವಿರುದ್ಧ ನಾನು ಈ ಪ್ರಕರಣದ ಪಿರ್ಯಾದನ್ನು ನೀಡಲು ರಾಘವ ನಾಯಕರವರ ದುಶ್ಪ್ರೇರಣೆ ಕಾರಣ ಎಂದರೆ ಸರಿಯಲ್ಲ. ನಾನು ಆರೋಪಿಯ ಕಚೇರಿಗೆ ಹೋದಾಗ ನಾನು ಒಂದು ಮೂಲೆಯಲ್ಲಿ ತಂಬಾಕು ಎಲೆ ಉಗುಳಿದ್ದೆ ಮತ್ತು ಆ ಬಗ್ಗೆ ಆರೋಪಿ ಮೀಟಿಂಗ್ ನಲ್ಲಿ ರಾಘವ ನಾಯಕ್ ರವರಿಗೆ ಹೇಳಿ ನನಗೆ ಕಚೇರಿಯನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವಂತೆ ತಿಳಿಸಲು ಎಚ್ಚರಿಗೆ ನೀಡಿದ್ದರು ಎಂದರೆ ಸರಿಯಲ್ಲ. ಆದರೆ ರಾಘವ ನಾಯಕ ಎಲೆ ಅಡಿಕೆ ತಿನ್ನುತಿದ್ದ ನನಗೆ ಅಷ್ಟು ಮಾತ್ರ ಗೊತ್ತು. ಆ ವಿಚಾರದಲ್ಲಿ ನಾನು ಅವನ ದುಶ್ ಪ್ರೇರಣೆಯಿಂದ ಆರೋಪಿ ವಿರುದ್ಧ ಈ ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

13. ಆರೋಪಿ ನನ್ನಿಂದ ಯಾವುದೇ ಹಣವನ್ನು ಲಂಚದ ರೂಪದಲ್ಲಿ ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಮೊದಲನೇಯದಾಗಿ ಲೋಕಾಯುಕ್ತ ಕಚೇರಿಗೆ ಅರ್ಜಿಯನ್ನು ಯಾವಾಗ ಕೊಟ್ಟೆ ಎಂದರೆ ನನ್ನ ಮೊಬೈಲ್ ನಲ್ಲಿ ಧ್ವನಿ ಮುದ್ರಣ ಮಾಡಿಕೊಳ್ಳಲು ಅವಕಾಶ ಇರಲಿಲ್ಲ, ಆದ್ದರಿಂದ ವಾಯ್ಸ್ ರೆಕಾರ್ಡರ್ ನೀಡುವಂತೆ ಅರ್ಜಿಯನ್ನು ಕೊಟ್ಟೆ , ಅದರ ದಿನಾಂಕ ನೆನಪಿಲ್ಲ. ನಾನು ಪುನಃ ನ್ಯಾಯಾಲಯದ ಮುಂದೆ ಅಸಮಂಜಸ ಉತ್ತರ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅರ್ಜಿಯಲ್ಲಿ ವಾಯ್ಸ್ ರೆಕಾರ್ಡರ್ ಬಗ್ಗೆ ಉಲ್ಲೇಖ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ–1 ರಲ್ಲಿ ಹಿಂಬದಿ ಎರಡನೇ ಪುಟದಲ್ಲಿ 2 ನೇ ಖಂಡಿಕೆಯಲ್ಲಿ ನಾನು ನನ್ನ ಮೊಬೈಲ್ ಬಗ್ಗೆ ಎಲ್ಲಿಯೂ ಉಲ್ಲೇಖ ಮಾಡಿಲ್ಲ ಎಂದರೆ ನಾನು ಹೇಳಿದ್ದೇನೆ ಅವರು ಬರೆದಿದ್ದಾರೋ ಇಲ್ಲವೋ ಗೊತ್ತಿಲ್ಲ. ನಿಪಿ–1 ಅರ್ಜಿಗೆ ಮೊದಲು ಆರೋಪಿ ಮತ್ತು

ನಾನು ಸ್ನೇಹಿತರಾಗಿದ್ದೆವು ಎಂದರೆ ಹೌದು, ಆರೋಪಿ ಅಧಿಕಾರಿಯಾಗಿದ್ದರಿಂದ ಪರಿಚಯ ಆಗಿದ್ದರು. ಆರೋಪಿ ಅಲ್ಲಿಗೆ ವರ್ಗ ಆಗಿ ಬಂದ ಮೇಲೆ ಅವರ ವಸತಿಗೆ ನನ್ನ ಸಹಾಯ ಪಡೆದಿದ್ದರು ಎಂದರೆ ಸರಿಯಲ್ಲ. ಆರೋಪಿ ವಾಸ ಇದ್ದ ಮನೆಯ ಸುತ್ತಮುತ್ತಲೂ ಜಾಗದಲ್ಲಿ ನಾನು ಕೊಠಡಿ ಮಾಡಿಕೊಂಡು ಇದ್ದೆ ಎಂದರೆ ಸರಿಯಲ್ಲ. ನನಗೆ ಸ್ವಂತ ಮನೆ ವಂದಿಗೆ ಗ್ರಾಮದಲ್ಲಿ ಇದೆ ಎಂದು ನುಡಿದಿರುತ್ತಾರೆ. ನನ್ನ ವಾಹನದಲ್ಲಿ ಆರೋಪಿಯನ್ನು ಕರೆದುಕೊಂಡು ಹೋಗುವುದು ಬಿಡುವುದು ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನಾನು ಮೇಲ್ಕಂಡ ಮೂರು ಪ್ರಶ್ನೆಗಳಿಗೆ ಸುಳ್ಳು ಉತ್ತರ ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ಮೊದಲು ಆರೋಪಿಗೆ ರೂ.5,000/- ಕೊಟ್ಟಿದ್ದೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ರೂ.50,000/- ಅನ್ನು ಆರೋಪಿ ಕೇಳಿದ್ದರು ಎಂದು ನಾನು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಎರಡನೇ ಪುಟದಲ್ಲಿ ಆ ದಿನ ರೂ.50,000/- ಅನ್ನು ಆರೋಪಿಗೆ ನೀಡಿದ್ದೆ ಎಂದು ಹೇಳಿದ್ದೇನೆ ಎಂದರೆ ನಾನು ರೂ.5000/- ಅನ್ನು ಆದಿನ ಕೊಟ್ಟಿದ್ದಾಗಿ ಹೇಳಿದ್ದೆನೆ ಅಲ್ಲಿ ಬೆರಳಚ್ಚು ಆಗುವಾಗ ತಪ್ಪು ಆಗಿದೆ. ನನ್ನ ಸಾಕ್ಷ್ಯ ಮತ್ತು ದೂರು ಸಂಪೂರ್ಣ ದುಶ್ಪ್ರೇರಿತ ಎಂದರೆ ಸುಳ್ಳು. ಸರ್ವೆ ಇಲಾಖಗೆ ನಾನು ರೂ.4300/- ತುಂಬಿದ ಬಗ್ಗೆ ರಶೀದಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

**(ನ್ಯಾಯಾಲಯದ ಅವಧಿ ಮುಗಿದಿದ್ದರಿಂದ ಮುಂದುವರಿದ ಪಾಟಿ ಸವಾಲನ್ನು ಮಧ್ಯಾಹ್ನ 2.45 ಗಂಟೆಗೆ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರ ಕನ್ನಡ , ಕಾರವಾರ

**ದಿನಾಂಕಃ 12-09-2024 ರಂದು ಪುನಃ ಮಧ್ಯಾಹ್ನ 2.58 ಗಂಟೆಗೆ ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಆರೋಪಿತರ ವಕೀಲರಾದ ಶ್ರೀ ಎಫ್ ಎಸ್ ಪಿ ರವರಿಂದಃ-**

14. ನಾನು ರೂ.5000/- ಅನ್ನು ಕೊಟ್ಟ ನೋಟುಗಳ ಸಂಖ್ಯೆಯನ್ನು ದೂರಿನಲ್ಲಿ ಹೇಳಿಲ್ಲ. ಯಾವ ಸ್ಥಳದಲ್ಲಿ ರೂ.5000/- ಅನನ್ನು ಕೊಟ್ಟೆ ಎಂದು ದೂರಿನಲ್ಲಿ ಹೇಳಿಲ್ಲ ಎಂದರೆ ಹೌದು, ಆದರೆ ರೂ.5000/- ಕೊಟ್ಟಿದ್ದೇನೆ ಎಂದು ಹೇಳಿದ್ದೇನೆ. ಕೀಪ್ಯಾಡ್ ಮೊಬೈಲ್ ಉಪಯೋಗಿಸಲು ಬರದ ನಾನು ಸೋನಿ ವಾಯ್ಸ್ ರೆಕಾರ್ಡರ್ ಅನ್ನು ಉಪಯೋಗಿಸಿದ್ದೇನೆ ಎಂದು ಹೇಳಿರುವುದು ತಪ್ಪು ಎಂದರೆ ಸರಿಯಲ್ಲ. ನಾನು ದಿನಾಂಕ 04.01.2023 ರಂದು ನಿಪಿ-3 ಅರ್ಜಿಯನ್ನು ಕೊಟ್ಟ ಎಷ್ಟು ದಿನಗಳಿಗೆ ಟ್ರ್ಯಾಪ್ ಕಾರ್ಯಾಚರಣೆ ಆಯಿತು ಎಂದರೆ ನೆನಪಿಲ್ಲ. ನಾನು ಹೇಳಿರುವ ಪ್ರಕಾರ ಯಾವುದೇ ಟ್ರ್ಯಾಪ್ ನಡೆದಿಲ್ಲ ಎಂದರೆ ಸರಿಯಲ್ಲ. ನಿಪಿ-4 ಅನ್ನು ನಾನು ಯಾರ ಮುಂದೆಯೂ ಪ್ರಮಾಣಿಕರಣ ಮಾಡಿಸಿಲ್ಲ. ಅದರಲ್ಲಿರುವ ವಿಚಾರವನ್ನು ನಾನು ಬರೆದಿಲ್ಲ ಎಂದರೆ ನಾನು ಅದನ್ನು ಹೇಳಿ ಬರೆಸಿದ್ದೇನೆ. ಆ ರೀತಿ ಪ್ರಮಾಣ ಪತ್ರ ಬರೆಸಲು ನಾನು ಅರ್ಹ ವ್ಯಕ್ತಿ ಅಲ್ಲ ಎಂದರೆ ಸರಿಯಲ್ಲ. ಕಾನೂನು ಪ್ರಕಾರ ನಿಪಿ-4 ಪ್ರಮಾಣ ಪತ್ರ ಅಲ್ಲ ಎಂದರೆ ಸರಿಯಲ್ಲ. ನಿಪಿ-4 ರಲ್ಲಿ ಹೇಳಿರುವ ಸೋನಿ ವಾಯ್ಸ್ ರೆಕಾರ್ಡರ್ ಅನ್ನು ನ್ಯಾಯಾಲಯಕ್ಕೆ ನಾನು ಹಾಜರುಪಡಿಸಿಲ್ಲ. ನಾನು ಅದನ್ನು ಲೋಕಾಯುಕ್ತ ಪೊಲೀಸನವರಿಗೆ ವಾಪಸ್ಸು ಕೊಟ್ಟಿದ್ದೇನೆ. ಸೋನಿ ವಾಯ್ಸ್ ರೆಕಾರ್ಡರ್ ನಲ್ಲಿ ಕ್ಯಾಸೆಟ್ ಇತ್ತಾ ಎಂದು ನಾನು ನಿಪಿ-4 ರಲ್ಲಿ ಹೇಳಿಲ್ಲ ಎಂದರೆ ಹೌದು. ನಿಪಿ-4 ರಲ್ಲಿ ವಾಯ್ಸ್ ರೆಕಾರ್ಡರ್ ನ ಗುರುತನ್ನು ಬರೆದಿಲ್ಲ ಎಂದರೆ ಹೌದು. ಅದನ್ನು ಬೇರೆ ಹಲವಾರು ಬೇರೆ ಸಲಕರಣೆಗಳೊಂದಿಗೆ ಬಳಸಿದ ಬಗ್ಗೆ ಬರೆದಿಲ್ಲ ಎಂದರೆ ನಾನು ಅದನ್ನು ಲೋಕಾಯುಕ್ತ ಪೊಲೀಸನವರಿಗೆ ಕೊಟ್ಟಿರುತ್ತೇನೆ. ಅವರು ನಂತರದ ಪ್ರಕ್ರಿಯೇ ಮಾಡಿಕೊಂಡಿದ್ದಾರೆ. ಲೋಕಾಯುಕ್ತ ಪೊಲೀಸ ನವರಿಗೆ ಕೊಟ್ಟ ಮೇಲೆ ಆ ಬಗ್ಗೆ ಪಂಚನಾಮೆ ಮಾಡಿ ಅದರಲ್ಲಿದ್ದ ಸಂಭಾಷಣೆಯನ್ನು ಎಲ್ಲರಿಗೂ ಕೇಳಿಸಿರುತ್ತಾರೆ ಹಾಗೂ ಕಿವಿಗೆ ಹಾಕಿ ಸಹ ಕೇಳಿಸಿದ್ದಾರೆ. ಪೊಲೀಸನವರಿಗೆ ವಾಪಸ್ಸು ಮಾಡಿದ ಮೇಲೆ ಅದು ನನ್ನ ವಶದಲ್ಲಿ ಇರುವುದಿಲ್ಲ. ಅದರಲ್ಲಿರುವ ಸಂಭಾಷಣೆ ನಂಬಲರ್ಹವಾಗಿಲ್ಲ ಎಂದರೆ ಸರಿಯಲ್ಲ. ನಿಪಿ-4 ರಲ್ಲಿ ಏನು ಸಂಭಾಷಣೆ ಧ್ವನಿ ಮುದ್ರಣ ಆಗಿದೆ ಎಂದು ಬರೆದಿಲ್ಲ. ನಿಪಿ-3 ಅರ್ಜಿಯಲ್ಲಿರುವ ನನ್ನ ಸಹಿ ಸಮರ್ಪಕವಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-5 ರಿಂದ 22 ಛಾಯಾಚಿತ್ರಗಳನ್ನು ಪ್ರಾಯೋಗಿಕ ಪಂಚನಾಮೆಯ ಸಮಯದಲ್ಲಿ ತೆಗೆದಿಲ್ಲ ಎಂದರೆ ಸರಿಯಲ್ಲ.

15. ಅಂಕೋಲಾ International Hotel ಗೆ ಸಂಜೆ 6.30 ಗಂಟೆಗೆ ತಲುಪಿದೆವು. ನಾನು ಮೊದಲು ಅಲ್ಲಿಗೆ ಹೋದೆ ನಂತರ ಅಲ್ಲಿಗೆ ಆರೋಪಿ ಬಂದನು. ನನ್ನ ಜೊತೆ ಆಗ ಯಾರೂ ಇರಲಿಲ್ಲ, ಆದರೆ ಸ್ವಲ್ಪ ಪಕ್ಕದಲ್ಲಿ ಒಬ್ಬ ಪಂಚ ಸಾಕ್ಷಿ ಇದ್ದರು. ಆರೋಪಿ ಅಲ್ಲಿ ನನ್ನನ್ನು ಬೇಟಿ ಮಾಡಿದಾಗ ಸಂಜೆ 6.30 ರಿಂದ 7.00 ಗಂಟೆ ಒಳಗೆ ಸಮಯ ಆಗಿತ್ತು. ನಂತರ ನಾನು ಮತ್ತು ಆರೋಪಿ ಅಲ್ಲಿ ಸ್ನಾಕ್ಸ ಮತ್ತು ಡ್ರಿಂಕ್ಸ ತೆಗೆದುಕೊಳ್ಳುತ್ತಿದ್ದೆವು ಎಂದರೆ ಹೌದು. ಸಂಭಾಷಣೆ ಮುಂದುವರೆದಂತೆ ನಮ್ಮಿಬ್ಬರಿಗೂ ನಶೆ ಏರಿತ್ತು ಎಂದರೆ ಸರಿಯಲ್ಲ. ನಾನು ಮತ್ತು ಆರೋಪಿ ಬೇರೆ ಬೇರೆ ಸಾರಾಯಿ ತೆಗೆದುಕೊಂಡಿದ್ದೆವು. ನಾನು 90 ml ಮೆಕಡೋವೆಲ್ ವಿಸ್ಕಿ ಸರಾಯಿಯಲ್ಲಿ ಅರ್ಧ ಸೇವನೆ ಮಾಡಿದ್ದೆ ಅರ್ಧ ಹಾಗೆಯೇ ಇತ್ತು , ಆರೋಪಿಯು ಅವರು ಸೇವನೆ ಮಾಡುವ ಬ್ರ್ಯಾಂಡ್ ಸಾರಾಯಿಯನ್ನು ತೆಗೆದುಕೊಂಡರು ಅದರ ಹೆಸರು ನನಗೆ ಗೊತ್ತಿಲ್ಲ. ಆರೋಪಿಯು 180 ml ನಲ್ಲಿ ಸುಮಾರು ಅರ್ಧ ದಷ್ಟು ಅಂದರೆ 90 ml ಸೇವನೆ ಮಾಡಿದ್ದರು. ದಿನಾಂಕ 04.01.2023 ಕ್ಕೆ ಮೊದಲು 8–10 ಬಾರಿ ಅದೇ ರೀತಿ ನಾನು ಮತ್ತು ಆರೋಪಿ ಸಾರಾಯಿ ಸೇವನೆ ಮಾಡಿದ್ದೆವು ಎಂದರೆ ಸರಿಯಲ್ಲ, ಆದರೆ ಆರೋಪಿ ಅದಕ್ಕೆ ಹಿಂದೆ 2–3 ನನ್ನನ್ನು ಸಾರಾಯಿ ಸೇವನೆ ಮಾಡಲು ಕರೆಸಿಕೊಂಡಿದ್ದರು. ಧ್ವನಿ ಮುದ್ರಣ ಆಗಿರುವ ಎರಡೂ ಸಂಭಾಷಣೆಯಲ್ಲಿ ನಾನು ಮತ್ತು ಆರೋಪಿ ಸಾರಾಯಿ ಸೇವನೆ ಮಾಡುತ್ತಿದ್ದೆವು ಎಂದರೆ ಹೌದು. ಎರಡನೇ ಧ್ವನಿ ಮುದ್ರಿತ ಸಂಭಾಷಣೆಯಲ್ಲಿ 3 ಬಾರಿ ನಾನು ರಾಘವ ನಾಯಕ್ ಅನ್ನು ನೆನಪಿಸಿಕೊಂಡಿದ್ದೇನೆ ಎಂದರೆ ನಾನು ನೆನಪಿಸಿಕೊಂಡಿಲ್ಲ. ಆ ಸಂಭಾಷಣೆಯಲ್ಲಿ ನಾನು "ಇವತ್ತೇ ಇರಬೇಕು ರಾಘು ಬಂದಿಲ್ಲ" ಎಂದು ಹೇಳಿದ್ದೇನೆ ಎಂದರೆ ಆರೋಪಿಯು ಅವರಿಗೆ ಫೋನ್ ಮಾಡಿ ಬರಲು ಹೇಳಿದ್ದರು ಆದರೆ ರಾಘು ಬಂದಿರಲಿಲ್ಲ ಆ ಸಂದರ್ಭದಲ್ಲಿ ನಾನು ಹೇಳಿದ್ದೇನೆ. ಆರೋಪಿಯು ರಾಘುಗೆ ಫೋನ್ ಮಾಡಿ ಕರೆಸಬೇಕು ಎಂದು ನನಗೆ ಹೇಳಿಲ್ಲ ಎಂದರೆ ಸರಿಯಲ್ಲ. ನಾನು ಆ ಸಂಭಾಷಣೆಯಲ್ಲಿ "ಗಾಳಿ ಬರುತ್ತದೆ ಬರ್ಲಿಲ್ಲಪ್ಪ ತಣ್ಣನೇ, ರಾಘು ಬರ್ಲಿಲ್ಲ ರಾಘುಗೆ ಒಂದು ಫೋನ್ ಮಾಡಿಲ್ಲ" ಎಂದು ಹೇಳಿದ್ದೇನೆ ಎಂದರೆ ಹೌದು. ನಂತರ ನಾನು ಸಂಭಾಷಣೆಯಲ್ಲಿ "ಮಾಡಬೇಕು ನೀವು ಹೇಳೋದಾದರೆ ಹೇಳಿ ಫೋನ್ ಮಾಡ್ತೇನೆ" ಎಂದು ಹೇಳಿದ್ದೇನೆ ಎಂದರೆ ನಾನು ಆರೋಪಿಗೆ ಆರೋಪಿ ಫೋನ್ ಮಾಡಲು ಹೇಳಿದ್ದಾದರೆ ರಾಘುಗೆ ಫೋನ್ ಮಾಡುವುದಾಗಿ ಆ ರೀತಿ ಹೇಳಿರುತ್ತೇನೆ. ನನಗೆ ರಾಘು ಬೇಕಾಗಿದ್ದ ಕಾರಣ ಆ ರೀತಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಅವರು ಆರೋಪಿಯ ಸಿಬ್ಬಂದಿಯಾಗಿದ್ದರಿಂದ ಹೇಳಿದ್ದೇನೆ. ರಾಘು ನನಗೆ ಎಲೆ ಅಡಿಕೆ ಸನ್ನಿವೇಶದ ಸಮಯದಿಂದ ದುಶ್ ಪ್ರೇರಣೆ ಮಾಡಿದ್ದಾನೆ ಎಂದರೆ ಸರಿಯಲ್ಲ. ಆರೋಪಿಯು "ಅವನಿಗೆ ಹೇಳುವುದು ಬೇಡ ರಾಘುಗೆ " ಎಂದು ಸಂಭಾಷಣೆಯಲ್ಲಿ ನನ್ನ ಸೂಚನೆಯನ್ನು ತಿರಸ್ಕರಿಸಿದ್ದಾನೆ ಎಂದರೆ ಆರೋಪಿ ರಾಘುಗೆ ಫೋನ್ ಮಾಡಿದ್ದರು, ರಾಘು ಬರದೇ ಇದ್ದ ಕಾರಣ ಆ ಬಗ್ಗೆ ಆ ಸಂಭಾಷಣೆ ಆಗಿದೆ. ಆರೋಪಿ ರಾಘುಗೆ ಫೋನ್ ಮಾಡಿದ ಬಗ್ಗೆ ಟ್ರ್ಯಾಪ್ ಕಾಲದ ಸಂಭಾಷಣೆಯಲ್ಲಿ ಉಲ್ಲೇಖ ಇಲ್ಲ

ಎಂದರೆ ಸರಿಯಲ್ಲ. ನಾನು ನಿತ್ಯ ಮಧ್ಯಪಾನ ವೆಸನಿ ಎಂದರೆ ನಾನು ಪ್ರತಿದಿನ ಸ್ವಲ್ಪ ಮಧ್ಯಪಾನ ಮಾಡುತ್ತೇನೆ. ನಾನು ನನ್ನ ಈ ಚಟಕ್ಕಾಗಿ ಆರೋಪಿಯನ್ನು ಬಲಿಪಶು ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಮಧ್ಯಪಾನ ಮಾಡುತ್ತೇನೆ ಎಂದು ಆರೋಪಿಗೆ ಗೊತ್ತಿದ್ದ ಕಾರಣ ಆರೋಪಿಯೇ ನನಗೆ ಫೋನ್ ಮಾಡಿ ಕರೆಸಿಕೊಳ್ಳುತ್ತಿದ್ದರು. ಆರೋಪಿ ನನಗೆ ಫೋನ್ ಮಾಡಿ ಕರೆಸಿಕೊಳ್ಳುತ್ತಿರಲಿಲ್ಲ ಮತ್ತು ನಾನಾಗಿಯೇ ಹೋಗಿ ಬೇಟಿ ಮಾಡುತ್ತಿದ್ದೆ ಎಂದರೆ ಸುಳ್ಳು. ಆ ಸಂಭಾಷಣೆ ನಶಾವಸ್ತೆಯಲ್ಲಿ ಆಗಿರುವುದರಿಂದ ಅದು ನಂಬಲರ್ಹವಲ್ಲ ಎಂದರೆ ಸರಿಯಲ್ಲ. ಆ ಸಂಭಾಷಣೆ ಎಷ್ಟು ಕಾಲ ನಡೆಯಿತು ಎಂದರೆ ನಾನು ಆಗ ಸಮಯವನ್ನು ನೋಡಿಕೊಳ್ಳಲಿಲ್ಲ.

16. ನಾನು ಹೇಳಿರುವ ರೂ.500/- ರ 30 ನೋಟು ನನಗೆ ಹೇಗೆ ಬಂತು ಎಂದು ನಾನು ಹೇಳಿಲ್ಲ ಎಂದರೆ ಅದು ನನ್ನ ಬಳಿ ಇದ್ದ ಹಣ ಆಗಿತ್ತು ಆದ್ದರಿಂದ ಹೇಳಿಲ್ಲ. ನಾನು ರೂ.5000/- ಅನ್ನು ಮೊದಲೇ ಕೊಟ್ಟಿದ್ದೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಸಂಭಾಷಣೆಯಲ್ಲಿ ನನಗೆ ಬಡತನ ಇದೆ ಎಂದು ಹೇಳಿರುವುದರಿಂದ ರೂ.5000/- ಖರ್ಚು ಮಾಡಲು ನನಗೆ ಸಾಧ್ಯವಿಲ್ಲ ಎಂದರೆ ನಾನು ನನಗೆ ಪ್ರತಿದಿನ ಖರ್ಚು ಮಾಡಿಕೊಳ್ಳುತ್ತೇನೆ , ಆದರೆ ಬೇರೆಯವರಿಗೆ ಪ್ರತಿದಿನ ಖರ್ಚು ಮಾಡಲು ಆಗುವುದಿಲ್ಲ. ಆರೋಪಿ ರೂ.50000/- ಕೇಳಿದ ಮತ್ತು ರೂ.40000/- ಕ್ಕೆ ಒಪ್ಪಿದ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಹೊಟೇಲ್ ನಲ್ಲಿ ರಾತ್ರಿ 8.30 ಗಂಟೆಗೆ ಕಾರ್ಯಾಚರಣೆ ಮುಗಿಯಿತು. ನಾವು ಸುಮಾರು 2 ಗಂಟೆ ಕಾಲ ಹೋಟೇಲ್ ನಲ್ಲಿ ಆಗ ಇದ್ದೆವಾ ಎಂದರೆ ಲೋಕಾಯುಕ್ತ ಪೊಲೀಸ ನವರು ಸಹ ಇದ್ದರು. ರಾತ್ರಿ 8 ರಿಂದ 8.30 ಗಂಟೆಗೆ ಕಾರ್ಯಾಚರಣೆ ಮುಗಿಯಿತು, ಆದರೆ ಸಮಯವನ್ನು ಆಗ ನೋಡಿಕೊಂಡಿರುವುದಿಲ್ಲ. ಆ ರೀತಿ ಯಾವುದೇ ಕಾರ್ಯಾಚರಣೆ ನಡೆದಿಲ್ಲ ಎಂದರೆ ಸರಿಯಲ್ಲ. ಆ ಕಾರ್ಯಾಚರಣೆಯನ್ನು ನೋಡಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಆ ಹೋಟೇಲ್ ನಲ್ಲಿ ವಿದ್ಯುತ್ ಹೋಗಿತ್ತು ಮತ್ತು ಕತ್ತಲೇ ಆವರಿಸಿತ್ತು ಎಂದರೆ ಸರಿಯಲ್ಲ. ರಾಸಾಯನಿಕ ಪುಡಿ ಬೆರೆಸಿದ್ದು ಪೊಲೀಸನವರು ಆಗಿದ್ದು ನನಗೆ ಆ ಬಗ್ಗೆ ಮಾಹಿತಿ ಇಲ್ಲ ಎಂದರೆ ನನ್ನ ಎದುರುಗಡೆ ಅದನ್ನು ಮಾಡಿರುತ್ತಾರೆ. ಪೂರ್ತಿ ಕಾರ್ಯಾಚರಣೆ ನಾನು ಪೊಲೀಸ ನವರ ಜೊತೆ ಸೇರಿ ಸೃಷ್ಟಿಸಿದ ಕಟ್ಟುಕತೆ ಎಂದರೆ ಸುಳ್ಳು. ಆರೋಪಿ ನನ್ನಿಂದ ಹಣ ಪಡೆದಿಲ್ಲ ಮತ್ತು ತನ್ನ ಕಿಸೆಯಲ್ಲಿ ಹಣ ಇಟ್ಟುಕೊಂಡಿಲ್ಲ ಎಂದರೆ ಸರಿಯಲ್ಲ. ಅದು ರೂ.500/- ರ 30 ನೋಟು ಇತ್ತು. ಹೋಟೇಲ್ ನಲ್ಲಿ ಕಾರ್ಯಾಚರಣೆ ಆಗಿಯೇ ಇಲ್ಲ ಎಂದರೆ ಸರಿಯಲ್ಲ. ಆರೋಪಿಯ ಕಚೇರಿಯಲ್ಲಿ ನಾನು ವಾಯ್ಸ್ ರೆಕಾರ್ಡರ್ ಬಳಸಿಲ್ಲ ಆದರೆ ಆರೋಪಿ ಕಚೇರಿಯಲ್ಲಿ ಲೋಕಾಯುಕ್ತ ಪೊಲೀಸನವರು ನನ್ನ ಮತ್ತು ಆರೋಪಿಯ ಧ್ವನಿಯನ್ನು ಸಂಗ್ರಹಿಸಿದರು.

17. ನಿಪಿ–23 ಪ್ರಾಯೋಗಿಕ ಪಂಚನಾಮೆಯನ್ನು ಲೋಕಾಯುಕ್ತ ಕಚೇರಿಯಲ್ಲಿ ಸಂಜೆ 4.00 ರಿಂದ 4.30 ಗಂಟೆಗೆ ಸುಮಾರಿಗೆ ಮುಗಿಸಿರುತ್ತಾರೆ. ಅದನ್ನು ಬೆಳಿಗ್ಗೆ 10.30 ಗಂಟೆಗೆ ಸುಮಾರಿಗೆ ಪ್ರಾರಂಭಿಸಿದರು. ಬೆಳಿಗ್ಗೆ 10.30 ಗಂಟೆಗೆ ಪ್ರಾಯೋಗಿಕ ಪಂಚನಾಮೆಯನ್ನು ಪ್ರಾರಂಭ ಮಾಡಿ ಮಧ್ಯಾಹ್ನ ಊಟದ ಸಮಯಕ್ಕೆ ಮುಗಿಸಿದರು ಎಂದು ಮುಖ್ಯ ವಿಚಾರಣೆಯಲ್ಲಿ ನಾನು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಹೋಟೆಲ್ ನಲ್ಲಿ 3 ನೇ ಮಹಡಿಗೆ ಹೋಗಲು ಲಿಫ್ಟ ಇರುತ್ತದೆ. ನಾನು ಟ್ರ್ಯಾಪ್ ಕಾರ್ಯಾಚರಣೆ ದಿನ ಹೋಟೆಲ್ ನ 3 ನೇ ಮಹಡಿಗೆ ಲಿಫ್ಟ ನಲ್ಲಿ ಹೋದೆ ಪೊಲೀಸನವರು ಲಫ್ಟ ನಲ್ಲಿ ಬಂದರಾ ಹಾಗೇ ಬಂದರಾ ಎಂದು ಗೊತ್ತಿಲ್ಲ. ಲಿಫ್ಟ ನಲ್ಲಿ ನನ್ನ ಜೊತೆ ಬಂದ ಪಂಚ ಬರಲಿಲ್ಲ, ನಾನು ಸ್ವಲ್ಪ ಮೊದಲು ಹೋದೆ ನಂತರ ನನ್ನ ಜೊತೆ ಕಳುಹಿಸಿದ್ದ ಪಂಚ ಹಿಂದೆ ಬಂದರು. ನನ್ನ ಜೊತೆ ಬಂದ ಪಂಚ ಹೋಟೆಲ್ ನಲ್ಲಿ ಒಂದು ಕಡೆ ಸೈಡ್ ನಲ್ಲಿ ಬೇರೆ ಮೇಜಿನಲ್ಲಿ ಕುಳಿತಿದ್ದರು. ನಾನು ಸನ್ನೆ ನೀಡಿದ್ದು ಕತ್ತಲಲ್ಲಿ ಯಾರಿಗೂ ಕಾಣಿಸಿಲ್ಲ ಎಂದರೆ ಸರಿಯಲ್ಲ. ಲೈಟ್ ಬೆಳಕು ಒಳಗೆ ಹೊರಗೆ ಎಲ್ಲಾ ಇತ್ತು. ನಾನು ಕುಳಿತದ್ದು ಸರಾಯಿ ಬಾರ್ ಎಂದರೆ ಅದು ಅದರಲ್ಲಿ ಬಾರ್ ಮತ್ತು ರೆಸ್ಟೋರೆಂಟ್ ಎರಡೂ ಇತ್ತು. ಅಲ್ಲಿ ಮಬ್ಬು ಬೆಳಕು ಮಾತ್ರ ಇರುತ್ತದೆ ಮತ್ತು ಪೂರ್ಣ ಬೆಳಕು ಇರುವುದಿಲ್ಲ ಎಂದರೆ ಸರಿಯಲ್ಲ. ಕಾರ್ಯಾಚರಣೆ ಹೋಟೆಲ್ ನಲ್ಲಿ ಮುಗಿದ ಮೇಲೆ ಸರ್ವೆ ಕಚೇರಿಗೆ ಹೋದೆವು. ಅಲ್ಲಿ ಕಾಗದ ಪತ್ರಗಳನೆಲ್ಲಾ ಪೊಲೀಸನವರು ತೆಗೆದುಕೊಂಡರು ಮತ್ತು ನಾನು ಸರ್ವೆ ಕಚೇರಿಯಲ್ಲಿ ಹಾಜರುಪಡಿಸಿದ್ದ ದಾಖಲೆಗಳನ್ನು ವಶಪಡಿಸಿಕೊಂಡರು. ಆ ದಾಖಲೆಗಳನ್ನು ದೋಷಾರೋಪಣಾ ಪಟ್ಟಿಯ ಜೊತೆ ಹಾಜರುಪಡಿಸಿದ್ದಾರೆ ನಾನು ಈಗಾಗಲೇ ಅವುಗಳನ್ನು ಗುರುತಿಸಿದ್ದೇನೆ. ಸರ್ವೆ ಕಚೇರಿಗೆ ಹೋದಾಗ ಅಂದಾಜು ರಾತ್ರಿ 9.00 ಗಂಟೆ ಆಗಿರಬಹುದು ನಾನು ವಾಚ್ ನೋಡಿಕೊಳ್ಳುತ್ತಿರಲಿಲ್ಲ ಎಂದು ಸ್ವತಃ ನುಡಿದಿರುತ್ತಾರೆ. ನಾನು ಆರೋಪಿಗೆ ಕೊಟ್ಟ ಹಣವನ್ನು ನನ್ನ ಅಂಗಿಯ ಎಡಕಿಸೆಯಲ್ಲಿ ಇಟ್ಟುಕೊಂಡಿದ್ದೆ. ಆ ಹಣವನ್ನು ಆರೋಪಿ ಮುಟ್ಟಿಯೇ ಇಲ್ಲ ಎಂದರೆ ಸರಿಯಲ್ಲ. ಅವನು ಆ ಹಣವನ್ನು ತನ್ನ ಪ್ಯಾಂಟಿನ ಎಡಕಿಸೆಯಲ್ಲಿ ಇಟ್ಟುಕೊಂಡ ಎಂದು ನಾನು ಹೇಳಿರುವುದು ಸಂಪೂರ್ಣ ಸುಳ್ಳು ಎಂದರೆ ಸರಿಯಲ್ಲ. ಕಾರ್ಯಾಚರಣೆಗೆ ಬಂದಿದ್ದ ಅಧಿಕಾರಿ ಡಿ ವೈ ಎಸ್ ಪಿ ರಾಜು. ಡಿ ಡಿ ಎಲ್ ಆರ್ ರವರನ್ನು ಲೋಕಾಯುಕ್ತ ಪೊಲೀಸನವರು ಕರೆಯಿಸಿದ್ದರು. ಅವರು ಲೋಕಾಯುಕ್ತ ಪೊಲೀಸನವರಿಗೆ ಹೇಳಿಕೆ ನೀಡಿರುತ್ತಾರೆ. ಅವರು ಏನೆಂದು ಹೇಳಿಕೆ ಕೊಟ್ಟರು ಎಂದು ನಾನು ಕೇಳಿಸಿಕೊಂಡಿಲ್ಲ.

**(ಆರೋಪಿ ಪರ ವಕೀಲರು ಸಮಯ ಕೋರಿದ್ದಾರೆ. ಸಾಕ್ಷಿಗೆ ರೂ.500/– ಭತ್ಯೆ ಪಾವತಿ ಮಾಡಿದ್ದಾರೆ. ಆದ್ದರಿಂದ ಮುಂದುವರಿದ ಪಾಟಿ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ